ಇಂದು ದಿಃ**29-09-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಸಿ.ಎನ್ ವಕೀಲರಿಂದ ಎದುರುದಾರರ ಪರಃ**

ನಾನು ಶಾಲೆ ಕಲಿತಿಲ್ಲ. ನನ್ನ ಸ್ವಂತ ಊರು ಕಲ್ಲಂಗೂರು ಗ್ರಾಮ, ಹಬ್ಬಲಗೆರೆ ಪೋಸ್ಟ್, ಶಿವಮೊಗ್ಗ ತಾಲ್ಲೂಕು ಎಂದರೆ ಸರಿ. ನಾನು ಈ ದಿನ ನ್ಯಾಯಾಲಯಕ್ಕೆ ಕಲ್ಲಂಗೂರು ಗ್ರಾಮದಿಂದ ಬಂದೆನು ಎಂದರೆ ಸರಿ. ನಾನು ಇವತ್ತಿಗೂ ಅಲ್ಲೇ ವಾಸ ಇದ್ದೇನೆ ಎಂದರೆ ಸರಿ. ನನಗೆ ಆದ ಗಾಯದ ಕುರಿತು ಈ ಅರ್ಜಿ ಸಲ್ಲಿಸಿದ್ದೇನೆ. ನನ್ನ ಅರ್ಜಿಯಲ್ಲಿ ಏನೇನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತ ಆಗುವ ಒಂದು ತಿಂಗಳ ಮೊದಲಿನಿಂದ ಎದುರುದಾರರ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ಒಂದು ತಿಂಗಳು ಕೆಲಸ ಮಾಡಿರುತ್ತೇನೆ. ದಿನಗೂಲಿ ನೌಕರ ಎಂದು ಕೆಲಸ ಮಾಡುತ್ತಿದ್ದೆನು. ನನಗೆ ಪ್ರತಿದಿನ ರೂ.250 ದಿಂದ 300 ದಿನಗೂಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ರೂ.1200/-ಇತ್ತು ಎಂದು ಹೇಳುತ್ತಾರೆ. ಈ ಕುರಿತು ದಾಖಲೆ ಇರುವುದಿಲ್ಲ. ಒಂದು ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುವ ಮೊದಲು, ಅವರು ರಕ್ಷಣಾ ಕವಚಗಳನ್ನು ಕೊಡುತ್ತಾರೋ ಇಲ್ಲವೋ ಎಂದು ತಿಳಿದುಕೊಂಡು ಕೆಲಸಕ್ಕೆ ಸೇರುತ್ತೇವೆ ಎಂದರೆ ಸರಿ. ಒಂದು ವೇಳೆ ರಕ್ಷಣಾ ಕವಚ ಕೊಡುತ್ತಾರೆ ಎಂದರೆ ಮಾತ್ರ ಕೆಲಸಕ್ಕೆ ಹೋಗುತ್ತೇವೆ ಎಂದರೆ ಸರಿ. ಸಾಕ್ಷಿ ಅವರು ಏನೂ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಒಂದು ವೇಳೆ ರಕ್ಷಣಾ ಕವಚ ಕೊಡೆದೇ ಹೋದರೆ ನಾವು ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿನಿತ್ಯ ರಕ್ಷಣಾ ಕವಚ ಹಾಕಿಕೊಂಡು ಕೆಲಸ ಮಾಡಬೇಕೆಂಬ ನಿಯಮ ಇದೆ ಎಂದರೆ ಸಾಕ್ಷಿ ಅವರು ಏನೂ ಕೊಟ್ಟಿರವುದಿಲ್ಲ ಎಂದು ಹೇಳುತ್ತಾರೆ. ಒಂದು ವೇಳೆ ರಕ್ಷಣಾ ಕವಚ ಕೊಡದೇ ಹೋದರೆ ಕೆಲಸ ಬಿಡುವ

ಅವಕಾಶ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಹೊಟ್ಟೆಪಾಡಿಗೆ ಹೋಗಿರುತ್ತೇವೆ ಎಂದು ಹೇಳುತ್ತಾರೆ. ನಾವು ಕೆಲಸ ಮಾಡುವ ಯಂತ್ರಗಳಿಗೆ ಯಾರಿಗೂ ಹಾನಿ ಆಗಬಾರದು ಆ ರೀತಿಯಲ್ಲಿ ರಕ್ಷಣಾ ಕವಚ ಆ ಯಂತ್ರಗಳಿಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗಿದ್ದ ಫ್ಯಾಕ್ಟರಿಯಲ್ಲಿ ಇದ್ದ ಎಲ್ಲಾ ಯಂತ್ರಗಳು ಹೊಸ ಯಂತ್ರಗಳು ಎಂದರೆ ಸರಿ. ಆ ಕಾರಣದಿಂದ ಎಲ್ಲಾ ಯಂತ್ರಗಳಿಗೆ ರಕ್ಷಣಾ ಕವಚ ಅಳವಡಿಸಲಾಗಿತ್ತು ಎಂದರೆ ಸರಿಯಲ್ಲ. ಫ್ಯಾಕ್ಟರಿಯವರು ಅದನ್ನು ಪ್ರಾರಂಭಿಸುವ ಮೊದಲು ಎಲ್ಲಾ ರೀತಿಯ ಕವಚಗಳನ್ನು ಮುಂಜಾಗ್ರತವಾಗಿ ಅಳವಡಿಸಿರುತ್ತಾರೆ ಎಂದರೆ ಸರಿಯಲ್ಲ.

ಅಪಘಾತದ ಬಗ್ಗೆ ನಾನು ಫಿರ್ಯಾದಿ ಸಲ್ಲಿಸಿರುತ್ತೇನೆ. ನನ್ನ ಹೆಂಡತಿ ಬರೆಯಿಸಿರುತ್ತಾರೆ ನಾನು ಅಲ್ಲಿಯೇ ಇದ್ದೇನು. ಒಂದು ವೇಳೆ ನಾನು ಯೇಂತ್ರದಲ್ಲಿ ಕೈ ಹಾಕಿದ್ದರೆ ಎಲ್ಲಾ ಬೆರಳುಗಳಿಗೆ ಜಖಂ ಆಗಬೆಕಿತ್ತು ಎಂದರೆ ಸರಿಯಲ್ಲ. ಒಂದು ವೇಳೆ ಎಲ್ಲಾ ಬೆರಳುಗಳಿಗೆ ಗಾಯ ಆಗಿದ್ದರೆ ಎಲ್ಲಾ ಬೆರಳುಗಳನ್ನು ತೆಗೆಯ ಬೇಕಾಗಿತ್ತು ಎಂದರೆ ಸಾಕ್ಷಿ ಮಧ್ಯದ ಬೆರಳು ಪೂರ್ಣ ಚಪ್ಪಟೆ ಆದ ಕಾರಣ ತೆಗೆದಿರುತ್ತಾರೆ ಎಂದು ಹೇಳುತ್ತಾರೆ. ಕಾರ್ಮಿಕರಿಗೆ ರಬ್ಬರ್ ಕೈ ಕವಚ ಕೊಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಎದುರುದಾರರು ಎಲ್ಲಾ ರಕ್ಷಣಾ ಕವಚಗಳನ್ನು ಪೂರೈಯಿಸಿದ್ದರೂ, ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿನಿತ್ಯಾ ಸಿಮೆಂಟ್ ನಲ್ಲಿ ಕೆಲಸ ಮಾಡುವ ಕಾರಣ, ಬೆರಳುಗಳಲ್ಲಿ ಮತ್ತು ಅಂಗೈಯಲ್ಲಿ ತೂತು ಬೀಳುವ ಸಂಭವ ಹೆಚ್ಚು ಇರುತ್ತದೆ ಎಂದರೆ ಸರಿ. ಆ ಕಾರಣದಿಂದ ಊಟ ಮಾಡಲು ಸಹ ಬರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಪ್ರತಿನಿತ್ಯಾ ಕೈ ಕವಚ ಬಳಸಲೇ ಬೇಕು ಎಂದು ನನಗೆ ಗೊತ್ತು ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷತನದಿಂದ ನಾನು

ಮಧ್ಯದ ಬೆರಳನ್ನು ಮಾತ್ರ ಮಿಷನ್ ನಲ್ಲಿ ಹಾಕಿದ ಕಾರಣ, ಗಾಯ ಆಗಿದೆ ಎಂದರೆ ಸರಿಯಲ್ಲ. ನಾನು ಯಂತ್ರವನ್ನು ಸ್ವಚ್ಛ ಮಾಡುವ ಕಾಲಕ್ಕೆ ಯಂತ್ರ ಬಂದ್ ಇತ್ತು ಎಂದರೆ ಸರಿ. ಸಾಕ್ಷಿ ಮಳೆ ಬಂದು ಒಮ್ಮಿಂದ ಒಮ್ಮೆಲೆ ಶುರುವಾಯಿತು ಎಂದು ಹೇಳುತ್ತಾರೆ. ಸಾಕ್ಷಿ ಯಂತ್ರದಲ್ಲಿ ನೀರು ಹೋದ ತಕ್ಷಣ ಮಿಷನ್ ಶುರುವಾಯಿತು ಎಂದು ಹೇಳುತ್ತಾರೆ. ನನಗೆ ಮಿಷನ್ ನಿಂದ ಯಾವುದೇ ವಿದ್ಯುತ್ ಶಾಕ್ ಹೊಡೆಯಲಿಲ್ಲ. ನನ್ನ ತಪ್ಪಿನಿಂದ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಎದುರುದಾರರ ನಿರ್ಲಕ್ಷತನದಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಎದುರುದಾರರು ಯಾವುದೇ ಪರಿಹಾರಕೊಡಲು ಭಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ನಾನು ಶಿವಮೊಗ್ಗ ತಾಲೂಕಿನ ವಾಸಿ ಇದ್ದರೂ, ಎದುರುದಾರರಿಗೆ ತೊಂದರೆ ಕೊಡಲು ಇಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಹನಗವಾಡಿಯಲ್ಲಿ ವಾಸ ಇದ್ದೇನು ಎಂದು ಹೇಳುತ್ತಾರೆ. 1 ಮತ್ತು 2 ನೇ ಎದುರುದಾರರ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.